# ಮಕ್ಕಳಲ್ಲಿ ಕಣ್ಣಿನ ಸಮಸ್ಯೆ ಕೆರಟೋಕೋನಸ್


**ಹೆಚ್ಚುತ್ತಿರುವ ಕಣ್ಣಿನ ಅಲರ್ಜಿಯಿಂದಾಗಿ 10–15 ವರ್ಷದ ಮಕ್ಕಳಲ್ಲಿಯೇ ಈಗೀಗ ದೃಷ್ಟಿದೋಷ ಕಾಣಿಸಿಕೊಳ್ಳುತ್ತಿದೆ. ಕಣ್ಣಿನಲ್ಲಿ ಉರಿ ಕಾಣಿಸಿಕೊಂಡು ಮಕ್ಕಳು ಕಣ್ಣು ಉಜ್ಜತೊಡಗಿದರೆಂದರೆ ಕೆರಟೋಕೋನಸ್ ಎಂಬ ತೊಂದರೆ ಆರಂಭ ಎಂದೇ ಅರ್ಥ. ಕೂಡಲೇ ತಜ್ಞ ನೇತ್ರವೈದ್ಯರನ್ನು ಕಾಣಬೇಕು.**


■ **ಉಮಾ ವೇಣೂರು**

ಕಲುಷಿತ ವಾತಾವರಣ, ದೂಳು ಮಿಶ್ರಿತ ಗಾಳಿ, ಅಲರ್ಜಿ, ಧಗೆ ಕಡಿಮೆ ಮಾಡಲೆಂದು ವಿಪರೀತ ಎಸಿ ಬಳಕೆ, ಅತ್ಯಂತ ಹತ್ತಿರದಿಂದ ಬಹಳ ಹೊತ್ತು ಟೀವಿ ನೋಡುವುದು, ಅತಿಯಾದ ಸ್ಮಾರ್ಟ್‌ಫೋನ್ ಬಳಕೆ... ಇವೇ ಮುಂತಾದ ಕಾರಣಗಳಿಂದ ಇಂದು ಮಕ್ಕಳಲ್ಲಿ ಕಣ್ಣಿನ ಸಮಸ್ಯೆ ಹೆಚ್ಚುತ್ತಿದೆ. ಮಕ್ಕಳ ಕಣ್ಣುಗಳಲ್ಲಿರುವ ಕಾರ್ನಿಯಾಕ್ಕೆ ಹಾನಿಯಾಗುವುದರಿಂದ 'ಕೆರಟೋಕೋನಸ್' ಎಂಬ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ದೃಷ್ಟಿ ಮಂದವಾದಂತಾಗಿ ನೋಡಲು, ಓದಲು ಕಷ್ಟವಾಗತೊಡಗುತ್ತದೆ. ಇದನ್ನು ಆರಂಭದ ಹಂತದಲ್ಲೇ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕಾದದ್ದು ಅನಿವಾರ್ಯ.

'ಮಗುವಿಗೆ ಕಣ್ಣಿನಲ್ಲಿ ಅಲರ್ಜಿ ಇದು ಎಂದು ಕಂಡುಬಂದಲ್ಲಿ ನೇತ್ರತಜ್ಞರಲ್ಲಿ ತಪಾಸಣೆ ಮಾಡಿಸಿಕೊಳ್ಳಿ. ಕಣ್ಣುಗಳನ್ನು ಮಕ್ಕಳು ಪದೇ ಪದೇ ಉಜ್ಜಿಕೊಳ್ಳುತ್ತಿದ್ದರೂ ಅದು ಕೆರಟೋಕೋನಸ್ ಕಾಯಿಲೆಯ ಮೊದಲ ಹಂತ ಎಂದು ಭಾವಿಸಬೇಕು. ಇದು ನಾಲ್ಕನೇ ಹಂತ ತಲುಪಿದರೆ ಕಣ್ಣಿನ ಶಸ್ತ್ರಚಿಕಿತ್ಸೆಯೊಂದೇ ದಾರಿ' ಎಂದು ಸಲಹೆ ಮಾಡುತ್ತಾರೆ ಬೆಂಗಳೂರಿನ ಡಾ. ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಾ ತಜ್ಞರಾಗಿರುವ ಡಾ. ರಘು ನಾಗರಾಜ್.

'ಸಾಮಾನ್ಯವಾಗಿ ಎಂಟರಿಂದ ಹದಿನೈದು ವರ್ಷದ ಮಕ್ಕಳಲ್ಲಿ ಕೆರಟೋಕೋನಸ್ ಈಗೀಗ ಹೆಚ್ಚಾಗಿ ಕಂಡುಬರುತ್ತಿದೆ, ಜನರಲ್ಲಿ ಈ ಬಗ್ಗೆ ಅರಿವು ಇಲ್ಲದೇ ಇರುವ ಕಾರಣ ಸಮಸ್ಯೆ ಹೆಚ್ಚುತ್ತಲೇ




ಇದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸುಮಾರು ಶೇಕಡಾ 20–25ರಷ್ಟು ಹೆಚ್ಚು ಮಂದಿ ಈ ಸಮಸ್ಯೆಯಿಂದ ಬಳಲುವಂತಾಗಿದೆ' ಎಂದು ಹೇಳುತ್ತಾರೆ ಇದೇ ಆಸ್ಪತ್ರೆಯಲ್ಲಿ ವೈದ್ಯಕೀಯ ನಿರ್ದೇಶಕರಾಗಿರುವ ಡಾ. ರವಿ ದೊರೈರಾಜ್.

'ಮಕ್ಕಳನ್ನು ಹೊರಗೆ ಆಡಲು ಬಿಡಬೇಡಿ. ಮೊಬೈಲ್ ಫೋನ್, ವಿಡಿಯೊಗೇಮ್, ಹತ್ತಿರದಿಂದ ಟೀವಿ ಬಹಳಹೊತ್ತು ನೋಡುವುದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ. ಕಣ್ಣುಗಳಲ್ಲಿ ಅಲರ್ಜಿ ಹೆಚ್ಚಾದರೆ ತಕ್ಷಣ ಕಾರ್ನಿಯಾ ತಜ್ಞರನ್ನೇ ಭೇಟಿಯಾಗಿ' ಎಂದೂ ಸಲಹೆ ಮಾಡುತ್ತಾರೆ ಡಾ. ರವಿ.

'ಸಾಮಾನ್ಯವಾಗಿ 8–15 ವರ್ಷದೊಳಗಿನ ಮಕ್ಕಳಲ್ಲಿ ಈ ಕೆರಟೋಕೋನಸ್ ಸಮಸ್ಯೆ ಕಂಡುಬರುತ್ತದೆ. ಇದು ಸುಮಾರು 35 ವರ್ಷದವರೆಗೂ ಇರುತ್ತದೆ. ಇದರಿಂದ ದೃಷ್ಟಿ ಮಂದವಾಗುವುದೇ ಅಲ್ಲದೆ ಕಣ್ಣು ಉರಿ ಸಮಸ್ಯೆ ಕಂಡುಬರುತ್ತದೆ. ಇದು 'ಪ್ರೋಗ್ರೆಸ್ಸಿವ್ ಕಣ್ಣಿನ ರೋಗವಾಗಿದ್ದು, ಕಾರ್ನಿಯಾ ತೆಳುವಾಗಿ ಕೋನ್ ಮಾದರಿಯ ಆಕಾರಕ್ಕೆ ತಿರುಗುತ್ತದೆ. ಇದು ಬೆಳಕಿನ ಪ್ರಮಾಣವನ್ನು ಕಡಿಮೆ ಮಾಡುವುದಲ್ಲದೆ ಮಕ್ಕಳ ದೃಷ್ಟಿ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ' ಎಂದು ಹೇಳುತ್ತಾರೆ ಈ ವೈದ್ಯರು.

'ಒಂದು ವೇಳೆ ಕೆರಟೋಕೋನಸ್ ಹೆಚ್ಚಾದರೆ ಮಕ್ಕಳು ಅತ್ಯುತ್ತಮವಾದ ಕನ್ನಡಕಗಳನ್ನು ಧರಿಸಿದರೂ ಅಥವಾ ಲೆನ್ಸ್ ಬಳಸಿದರೂ ಪೂರ್ಣಪ್ರಮಾಣದಲ್ಲಿ ದೃಷ್ಟಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ ಎನ್ನುವ ಅವರು, ಕೆರಟೋಕೋನಸ್‌ಗೆ ಆಪ್ಟಿಕಲ್ ಕೆರಟೊ ಪ್ಲಾಸ್ಟಿ ಮತ್ತು ಕೊಲಜನ್ ಕ್ರಾಸ್‌ಲಿಂಕಿಂಗ್ ಚಿಕಿತ್ಸೆ ಪಡೆಯಬಹುದು. ಭಾರತದಲ್ಲಿ ಪ್ರತಿ 1,500 ಮಕ್ಕಳಲ್ಲಿ ಒಂದು ಮಗು ಕೆರಟೋಕೋನಸ್‌ನಿಂದ ಬಳಲುತ್ತಿದೆ. ರಾಜ್ಯದಲ್ಲಿ ಈ ವರ್ಷ ಸುಮಾರು 400 ಮಕ್ಕಳಿಗೆ ಈ ಸೋಂಕು ತಗುಲಿದೆ' ಎನ್ನುತ್ತಾರೆ.

## ಕೆರಟೊಪ್ಲಾಸ್ಟಿ ವರದಾನ

ಮಂಡ್ಯ ಮೂಲದ ಯುವರಾಜ್‌ಗೆ 32ರ ಹರೆಯ. ಕಳೆದ ಐದು ವರ್ಷಗಳಿಂದ ದೃಷ್ಟಿ ಸಮಸ್ಯೆ ಎದುರಿಸುತ್ತಿದ್ದ ಯುವರಾಜ್‌ನ ಕಾರ್ನಿಯಾ ಅತ್ಯಂತ ತೆಳುವಾಗಿತ್ತು. ದೃಷ್ಟಿಯ ಪ್ರಮಾಣವೂ 6/60ಕ್ಕೆ ಇಳಿದಿತ್ತು. ಶಸ್ತ್ರಚಿಕಿತ್ಸೆಯೊಂದೇ ದಾರಿ ಎಂಬುದನ್ನು ಮನಗಂಡ ವೈದ್ಯರು ಈತನಿಗೆ ಕೆರಟೊಪ್ಲಾಸ್ಟಿ (ಕಾರ್ನಿಯಾ ಕಸಿ) ಮಾಡಿದರು. ಈಗ ಯುವರಾಜ್ ದೃಷ್ಟಿಯ ಪ್ರಮಾಣ 6/9ಕ್ಕೆ ಬಂದಿದ್ದು ಸರಿಯಾಗಿ ದೃಷ್ಟಿ ಮರಳಿಬಂದಿದೆ. ■

---

ಮಕ್ಕಳಲ್ಲಿ ಹೆಚ್ಚುತ್ತಿರುವ ಕಣ್ಣಿನ ಅಲರ್ಜಿಯಿಂದ ದೃಷ್ಟಿದೋಷ; 10–15 ವರ್ಷದ ಮಕ್ಕಳಲ್ಲಿಯೇ ಈ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಕಣ್ಣಿನಲ್ಲಿ ಉರಿ ಕಾಣಿಸಿಕೊಂಡು ಮಕ್ಕಳು ಕಣ್ಣು ಉಜ್ಜತೊಡಗಿದರೆಂದರೆ ಸಮಸ್ಯೆಯ ಆರಂಭ ಎಂದೇ ಅರ್ಥ. ಕೂಡಲೇ ತಜ್ಞ ನೇತ್ರವೈದ್ಯರನ್ನು ಭೇಟಿಯಾಗಿ ತಪಾಸಣೆ ಮಾಡಿಸಿಕೊಳ್ಳಿ.

- ಕಲುಷಿತ ವಾತಾವರಣ, ದೂಳು, ಉರಿ ಮತ್ತು ಡ್ರೈ ಅಲರ್ಜಿ ಕಣ್ಣಿನ ಸಮಸ್ಯೆಗೆ ಪ್ರಮುಖ ಕಾರಣ. ಇದರಿಂದ ಕೆರಟೊಕೊನಸ್ ತೊಂದರೆ ಉಂಟಾಗುತ್ತದೆ. ಸಮಸ್ಯೆ ಉಲ್ಬಣವಾದರೆ ಶಸ್ತ್ರಚಿಕಿತ್ಸೆಯೊಂದೇ ದಾರಿ.
- ಮೊಬೈಲ್, ವಿಡಿಯೊಗೇಮ್ ಆಡುವುದನ್ನು ಕಡಿಮೆ ಮಾಡಿ.
- ಭಾರತದಲ್ಲಿ ಪ್ರತಿ 1,500 ಮಕ್ಕಳಲ್ಲಿ ಒಂದು ಮಗು ಕೆರಟೋಕೋನಸ್‌ನಿಂದ ಬಳಲುತ್ತಿದೆ. ರಾಜ್ಯದಲ್ಲಿ ಈ ವರ್ಷ ಸುಮಾರು 400 ಮಕ್ಕಳಿಗೆ ಈ ಸೋಂಕು ತಗುಲಿದೆ.